**Crl Mis** 292/2022 **PW**–1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ **23.02.2023** ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಾದ ಶ್ರೀ RSM ರವರಿಂದ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿಸಿ ಕೇಳಿ ತಿಳಿದುಕೊಂಡು ನನ್ನ ಸಹಿಯನ್ನು ಹಾಕಿರುತ್ತೇನೆ.

ತಹಶಿಲ್ದಾರ್ ಚಾಮರಾಜನಗರ ಇವರು ನೀಡಿರುವ ಅಲಭ್ಯ ಪ್ರಮಾಣ ಪತ್ರವನ್ನು ಹಾಜರು ಮಾಡಿರುತ್ತೇನೆ, ಅದನ್ನು ನಿಪಿ–**1** ಎಂದು ಗುರುತಿಸಲಾಯಿತು.

ನಮ್ಮ ವಂಶವೃಕ್ಷ ಪ್ರಮಾಣ ಪತ್ರವನು ಹಾಜರುಮಾಡಿರುತ್ತೇನೆ, ಅದನ್ನು ನಿಪಿ–**2** ಎಂದು ಗುರುತಿಸಲಾಯಿತು.

ನನ್ನ ಆಧಾರ್ ಕಾರ್ಡನ್ನು ಹಾಜರು ಮಾಡಿರುತ್ತೇನೆ, ಅದನ್ನು ನಿಪಿ–**3** ಎಂದು ಗುರುತಿಸಲಾಯಿತು. ಸಾಕ್ಷಿಗೆ ತಮ್ಮ ದಿನನಿತ್ಯ ಬದುಕಿಗೆ ನಿಪಿ–**3** ರ ಅವಶ್ಯಕತೆ ಇರುವ ಕಾರಣ ಹಾಜರುಪಡಿಸಿರುವ ಅದರ ದೃಢೀಕೃತ ನಕಲನ್ನು ನಿಪಿ–**3** ಕ್ಕೆ ತುಲನೆ ಮಾಡಿ ನೋಡಿ ಸರಿ ಬಂದ ಕಾರಣ ದೃಢೀಕೃತ ನಕಲನ್ನು ನಿಪಿ–**3**(ಎ) ಎಂದು ಗುರುತಿಸಿ ನಿಪಿ–**3** ನ್ನು ಸಾಕ್ಷಿಗೆ ಮರಳಿ ನೀಡಲಾಯಿತು.

ನ್ಯಾಯಾಲಯದ ಆದೇಶದಂತೆ **2** ಪತ್ರಿಕ ಪ್ರಕಟಣೆಗಳನ್ನು ಹೊರಡಿಸಿರುತ್ತೇನೆ. ಸದರಿ ಪತ್ರಿಕೆಗಳನ್ನು ಹಾಜರು ಮಾಡಿರುತ್ತೇನೆ, ಅವುಗಳನ್ನು ನಿಪಿ–**4** ಮತ್ತು **5** ಎಂದು ಗುರುತಿಸಲಾಯಿತು.

**ವಿಚಾರಣೆಃ ನ್ಯಾಯಾಲಯದಿಂದಃ**

ಮೃತ ಪುಟ್ಟಮಾದಮ್ಮ ನನ್ನ ತಾಯಿ. ನನ್ನ ತಂದೆಯ ಹೆಸರು ಚಿಕ್ಕಮಾರಶೆಟ್ಟಿ, ನನ್ನ ತಂದೆ ಈಗ ಬದುಕಿಲ್ಲ, ನನ್ನ ತಂದೆ ತಾಯಿಗೆ ನಾವು ಅರ್ಜಿದಾರ ನಂ.**1** ರಿಂದ **6** ರವರು ಮಾತ್ರ ಮಕ್ಕಳು. ನನ್ನ ತಂದೆಯು ದಿನಾಂಕ **01.04.1967** ರಂದು ಮೃತ ಪಟ್ಟಿರುತ್ತಾರೆ. ನಮ್ಮ ತಾಯಿಗೆ ನಾವು ಅರ್ಜಿದಾರರನ್ನು ಹೊರತು ಪಡಿಸಿ ಯಾವುದೇ ವಾರಸುದಾರರು ಇರುವುದಿಲ್ಲ.

ಆಸ್ತಿಯ ಸಂಬಂಧ ಖಾತೆ ಬದಲಾವಣೆ ವಿಚಾರವಾಗಿ ನನಗೆ ನನ್ನ ತಾಯಿಯ ಮರಣ ಪ್ರಮಾಣ ಪತ್ರ ಬೇಕಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

23.02.2023.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.